ಕಳಪೆ ಹತ್ತಿ ಬೀಜ ರೈತರಿಗೆ ಸರಬರಾಜು ಆಗಿರುವುದರ ಬಗ್ಗೆ

3530 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ವರ್ಷ ಕರ್ನಾಟಕ ಬೀಜ ನಿಗಮದಿಂದ ರೈತರಿಗೆ ಒದಗಿಸಿರುವ ಹತ್ತಿ ಬೀಜ ಕಳಪೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಕಳಪೆ ಬೀಜಗಳನ್ನು ಮಾರಾಟ ಮಾಡಿರುವವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?*

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ಯಾವುದೇ ದೂರು ಬಂದಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಉತ್ಪಾದನಾ ವಸ್ತುಗಳ ಬೆಲೆ ನಿಗಧಿ ಮಾಡಲು ಅನುಸರಿಸಿದ ವಿಧಾನ

3531 - ಶ್ರೀ ಎನ್.ಜಿ.ನಾಯಕ್ (ಮೊಳಕಾಲ್ಮೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೃಷಿ ಇಲಾಖೆ ಇದುವರೆಗೂ ಕೃಷಿ ವಸ್ತುಗಳ ಉತ್ಪಾದನಾ ಬೆಲೆ ನಿಗಧಿ ಮಾಡಲು ಅನುಸರಿಸಿದ ವಿಧಾನಗಳೇನು?*

ಆ) *ಕೇಂದ್ರ ಸರ್ಕಾರ ಇತ್ತೀಚೆಗೆ ಮಾಡುತ್ತಿರುವ ಸುಧಾರಣೆಗಳ ಬಗ್ಗೆ ರಾಜ್ಯ ಸರ್ಕಾರವು ಇದುವರೆಗೂ ಕಾರ್ಯೋನ್ಮುಖವಾಗಿದೆಯೇ?*

ಇ) *ರಾಜ್ಯ ಸರ್ಕಾರವು ಹತ್ತಿ ಬೀಜದ ಬೆಲೆ ಏರಿಕೆ ಬಗ್ಗೆ ಏನಾದರೂ ಆಲೋಚನೆ ಮಾಡಿದೆಯೇ?*

ಈ) *ಹಾಗಿದ್ದಲ್ಲಿ ಹತ್ತಿ ಬೀಜದ ಬೆಲೆಯನ್ನು ಎಷ್ಟೆಂದು ನಿಗಧಿ ಮಾಡಿದೆ?*

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಕೃಷಿ ನಿರ್ವಹಣೆ ವಿಭಾಗದಿಂದ ಕೃಷಿ ಉತ್ಪನ್ನಗಳ ಉತ್ಪಾದನಾ ಬೆಲೆಯನ್ನು ನಿಗಧಿ ಮಾಡಲು ಅಧ್ಯಯನವನ್ನು ತೆಗೆದುಕೊಳ್ಳಲಾಗುತ್ತಿದೆ. ಪ್ರತಿ ಅಧ್ಯಯನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳನ್ನು 10 ಕೃಷಿ ವಲಯಗಳಲ್ಲಿ ವಿಂಗಡಿಸಿ ಸುಮಾರು 68 ಆಯ್ದ ಕೇಂದ್ರಗಳಲ್ಲಿ ಈ ಅಧ್ಯಯನವನ್ನು ರೈತರ ತಾಕುಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಇದರ ಸಲುವಾಗಿ ಪ್ರತಿ ಕೇಂದ್ರದಲ್ಲಿ 40 ಹಿಡುವಳಿದಾರರನ್ನು ವೈಜ್ಞಾನಿಕವಾಗಿ ಆಯ್ಕೆ ಮಾಡಲಾಗುತ್ತದೆ. ಹೀಗೆ ಆಯ್ಕೆ ಮಾಡಿದ ರೈತರು ಪ್ರತಿ ಬೆಳೆಗೆ ಮಾಡಿದ ವೆಚ್ಚದ ಮಾಹಿತಿಯನ್ನು ಸತತವಾಗಿ ಮೂರು ವರ್ಷಗಳ ಕಾಲ ಸಂಗ್ರಹಿಸಿ ಕ್ರೋಢೀಕರಿಸಲಾಗುವುದು. ಮಾಹಿತಿ ಸಂಗ್ರಹಣೆಯನ್ನು ತರಬೇತಿ ನೀಡಿದ ಕ್ಷೇತ್ರ ಸಹಾಯಕರುಗಳ ಮೂಲಕ ಮಾಡಲಾಗುತ್ತಿದ್ದು ಇದನ್ನು ಇಲಾಖೆಯ ಅಧಿಕಾರಿಗಳು ಕ್ರೋಢೀಕರಿಸಿ ವಿಶ್ಲೇಷಿಸುತ್ತಾರೆ. ರೈತರಿಗೆ ತಗಲುವ ಪ್ರತಿಯೊಂದು ವೆಚ್ಚಗಳ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಅಂದರೆ ಬದಲಾಗುವ ವೆಚ್ಚಗಳಾದ ಬಿತ್ತನೆ ಬೀಜ, ಸಸ್ಯ ಸಂರಕ್ಷಣೆ, ರಸಗೊಬ್ಬರಗಳು, ದುರಸ್ಥಿ ವೆಚ್ಚ, ಮಾನವ ದುಡಿಮೆ ಎತ್ತುಗಳ ದುಡಿಮೆ, ಕೊಟ್ಟಿಗೆ ಗೊಬ್ಬರ, ನೀರಾವರಿ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಮತ್ತು ಸ್ಥಿರ ವೆಚ್ಚಗಳಾದ ಉಪಕರಣಗಳ ಮೇಲಿನ ಬಂಡವಾಳದ ಬಡ್ಡಿ, ಭೂ ಕಂದಾಯ ವಿವಿಧ ಖರ್ಚುಗಳ ಮೇಲಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಈ ರೀತಿ ಸಂಗ್ರಹಿಸಿದ ಮಾಹಿತಿಯನ್ನು ವಲಯವಾರು ಬೆಳೆವಾರು ಕ್ರೋಢೀಕರಿಸಿ, ವಿಶ್ಲೇಶಿಸಿ ಪ್ರತಿ ಕ್ವಿಂಟಾಲ್ ಉತ್ಪಾದನಾ ಬೆಲೆಯನ್ನು ಕಂಡು ಹಿಡಿಯಲಾಗುವುದು.